# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮತ್ತಿಕೆರೆ ಉಪವಿಭಾಗದ ವಾರ್ಡ್ ಸಂಖ್ಯೆ:36 ಮತ್ತಿಕೆರೆ

ಕಛೇರಿಯಲ್ಲಿ ದಿನಾಂಕ:17-08-2021 ರಂದು ನಡೆದ ಮೀಟಿಂಗ್ ನಡವಳಿಗಳು

ವಿಷಯ : ಪಾಲಿಕೆ ಎಲ್ಲಾ ವಾರ್ಡ್‌ಗಳಲ್ಲಿ "Ward Decentralized Triage and Emergency Response (DETER) " Committee for Covid-19 Management (WDC) ರಚಿಸುವ ಕುರಿತು.

ಉಲ್ಲೇಖ : 1. ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಕಛೇರಿ ಆದೇಶದ ಸಂಖ್ಯೆ ಬಿ12(5)ಪಿ.ಆರ್/35/20–21, ದಿನಾಂಕ : 16.04.2021

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ನಂ.RD 158 TNR 2020, ದಿನಾಂಕ :07–05–2021

3. ಈ ಕಛೇರಿಯ ಸಭಾ ಸೂಚನೆ ಪತ್ರದ ದಿನಾಂಕ :11–08–2021

---

ಉಲ್ಲೇಖ (1)ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ (2) ರ ಆದೇಶದ ಅಂಶಗಳನ್ನು ಪರಿಶೀಲಿಸಲು ದಿನಾಂಕ:17-08-2021ರಂದು ಮತ್ತಿಕೆರೆ ವಾರ್ಡ್ ನಂ.36ರ ಕಾರ್ಯಾಲಯದಲ್ಲಿ ವಾರ್ಡ್ ಕಮಿಟಿ ಸಮಿತಿ ಸಭೆಯನ್ನು ಉಲ್ಲೇಖ ಪತ್ರ (3) ರಂತೆ ಬೆಳಗ್ಗೆ 11-30 ಗಂಟೆಗೆ ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು.

ಸದಸ್ಯರು ಕಾರ್ಯದರ್ಶಿಗಳು ಕಮಿಟಿ ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

ಶ್ರೀ ಜೆ.ಬಿ. ಶ್ರೀಧರ್ ಮೂರ್ತಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ:36ರ ವಾರ್ಡ್ ಕಮಿಟಿ ರವರು ಮಾತನಾಡುತ್ತಾ, ಸಭೆಯನ್ನು ಪ್ರಾರಂಭಿಸಲಾಗಿತ್ತು, ಉಲ್ಲೇಖ (2) ರ ಆದೇಶವನ್ನು ವಿವರಿಸುತ್ತಾ ವಾರ್ಡ್ ನಂ.36ರಲ್ಲಿ "Ward Decentralized Triage and Emergency Response (DETER)" Committee for Covid-19 Management (WDC) ಯ ಸಮಿತಿ ರಚನೆ ವಾರ್ಡ್ ಮಟ್ಟದ ಕೋವಿಡ್ ನಿರ್ವಹಣೆ WDC (ವಾರ್ಡ್ ತಡೆ ಸಮಿತಿ) ವಿಕೇಂದ್ರೀಕೃತ ಚಿಕಿತ್ಸೆಯ ಸರದಿ ನಿರ್ಧಾರ ಮತ್ತು ತುರ್ತು ಪ್ರತಿಕ್ರಿಯೆ ಕೇಂದ್ರ ರಚನೆ, ಸ್ವರೂಪ, ಕಾರ್ಯವಿಧಾನ, ಅಗತ್ಯತೆ ಹಾಗೂ ಕೋವಿಡ್-19 ರ ನಿಯಂತ್ರಣ ಹಾಗೂ ಚಿಕಿತ್ಸೆ ಸಂಬಂಧ ತೆಗೆದುಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು.

1. ಹಿಂದಿನ ಸಭೆಗಳಲ್ಲಿ ನಿರ್ಣಯಗಳ ಅನುಪಾಲನೆ ಹಾಗೂ ಸಾರ್ವಜನಿಕರಿಗೆ ಸಮರ್ಪಕ ಸೇವೆ ನೀಡುವ ಬಗ್ಗೆ ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳಿಗೆ ಅನುಪಾಲನೆ ಮತ್ತು ವಾರ್ಡ್‌ನಲ್ಲಿ ಸಾರ್ವಜನಿಕರ ದಿನನಿತ್ಯ ಮೂಲಭೂತ ಸೌಕರ್ಯಗಳು ಹಾಗೂ ಸೇವೆ ಒದಗಿಸುವ ಸಂಬಂಧ ನಿರಂತರವಾಗಿ ಕ್ರಮವಹಿಸಲು ಹಾಜರಿದ್ದ ಎಲ್ಲಾ ಬಿ.ಬಿ.ಎಂ.ಪಿ. ಅಧಿಕಾರಿ ಸಿಬ್ಬಂದಿಯವರಿಗೆ ತಿಳಿಸಿದರು.

ಮು.ಶಿ.ನೋ

2. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ಆರೋಗ್ಯಾ ವೈದ್ಯಾಧಿಕಾರಿಗಳು ಮಾತನಾಡಿ ಈ ಕೆಳಕಂಡಂತೆ ಕೋವಿಡ್-19ರ ವರದಿಯನ್ನು ನೀಡಿರುತ್ತಾರೆ.

H.I - 03

AC - 22

ಪ್ರಸ್ತುತ ಆಗಸ್ಟ್ 9 ರಿಂದ 6 ವರ್ಷದೊಳಗಿನ ಮಕ್ಕಳಿಗೆ ಲಸಿಕೆಯನ್ನು ಹಾಕಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಆಟೋ ಮುಖಾಂತರ ಅನೌನ್ಸ ಮಾಡಲಾಗುತ್ತಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಒಟ್ಟು ಕೋವಿಡ್ ಲಸಿಕೆ ಪಡೆದವರು - 18470;

ಖಾಸಗಿ ಆಸ್ಪತ್ರೆಗಳಲ್ಲಿ ಒಟ್ಟು ಕೋವಿಡ್ ಲಸಿಕೆ ಪಡೆದವರು -35470; **(Including Mathikere PHC)**

3. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಮಾರ್ಷಲ್‌ಗಳು ಒಟ್ಟು 15,000/-ಗಳ ದಂಡ ವಸೂಲಾತಿ ಮಾಡಿರುತ್ತಾರೆ. ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

4. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, 9ನೇ ಮತ್ತು 8ನೇ ಮುಖ್ಯರಸ್ತೆಗಳಲ್ಲಿರುವ ಕಸವನ್ನು ಸಮರ್ಪಕವಾಗಿ ಬೇರ್ಪಡಿಸಲು ಸೂಚಿಸಿದ್ದು ಹಾಗೂ ಬೂಸಾ ಫ್ಯಾಕ್ಟರಿ ಹಾಗೂ ಸಂಜೀವಪ್ಪ ಕಾಲೋನಿಗಳಲ್ಲಿರುವ ಬ್ಲಾಕ್ ಸ್ಪಾಟ್‌ಗಳಲ್ಲಿ ಕಸವನ್ನು ಸಂಪೂರ್ಣವಾಗಿ ತೆಗೆಯಲು ತಿಳಿಸಿರುತ್ತಾರೆ

5. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಆರ್.ಕೆ. ಗಾರ್ಡನ್‌ನಲ್ಲಿ ಪ್ರತಿದಿನ ಕಸಗುಡಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿರುತ್ತಾರೆ.

6. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆ ರವರು ವಲಯ ಬದಲಾವಣೆಯಿಂದ ಕೆ.ಎಂ.ಸಿ ಕಾಯ್ದೆ 1976ರ ಆದೇಶದನ್ವಯ ಮರು ಮೌಲ್ಯಮಾಪಾನ-2016 ರಂತೆ ಕಟ್ಟಡದ ಮಾಲೀಕರುಗಳಿಂದ ಹೆಚ್ಚು ತೆರಿಗೆಯನ್ನು ವಸೂಲಾತಿ ಮಾಡಲಾಗುತ್ತಿರುವ ಬಗ್ಗೆ ಚರ್ಚಿಸಲಾಗಿ, ಅಧ್ಯಕ್ಷರು ಈ ಬಗ್ಗೆ ಮಾತನಾಡಿ ಮುಂದಿನ ಸಭೆಯಲ್ಲಿ ಇದಕ್ಕೆ ಸಂಬಂಧಿಸಿದ ವರದಿಯನ್ನು ಸಭೆಗೆ ಸಲ್ಲಿಸಲು ಸೂಚಿಸಿರುತ್ತಾರೆ.

7. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಒಟ್ಟು 10 ಹೊಸ ಬೀದಿ ದೀಪಗಳು ಹಾಗೂ ಹೊಸ 2ಪೋಲ್‌ಗಳ ಅವಶ್ಯವಾಗಿರುತ್ತದೆ ಇವುಗಳನ್ನು ಒದಗಿಸಲು ಪಾಲಿಕೆ ಬೀದಿ ದೀಪಗಳ ವಿಭಾಗದ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

8. ವಾರ್ಡ್ ಸಂಖ್ಯೆ:36, ಮತ್ತಿಕೆರೆ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂಎಸ್ಎಸ್‌ಬಿ ಇಲಾಖೆಯಿಂದ ಕಾಮಗಾರಿ ನಿರ್ವಹಿಸಿದ್ದು, ಕಾಮಗಾರಿಯು ಪೂರ್ಣಗೊಂಡಿದ್ದು, ಡೆಬ್ರೀಸ್‌ಗಳನ್ನು ತೆರವುಗೊಳಿಸಲದೇ ಅಲ್ಲಿಯೇ ಬಿಟ್ಟಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಅಧ್ಯಕ್ಷರು ಈ ಬಗ್ಗೆ ಕೂಡಲೇ ಕ್ರಮ ಕೈಗೊಂಡು ಡೆಬ್ರೀಸ್ ತೆರವುಗೊಳಿಸಲು ಸೂಚಿಸಿರುತ್ತಾರೆ.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

(ಸಹಿ) 17/8/21
(ಜಿ.ಬಿ.ಶ್ರೀಧರ್ ಮೂರ್ತಿ).
ಅಧ್ಯಕ್ಷರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ.

(ಸುಪ್ರಾ)
ಸದಸ್ಯ ಕಾರ್ಯದರ್ಶಿ,
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ